ದಿನಾಂಕಃ **14.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಸಾಕ್ಷಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಸರಿಯಾದ ರೀತಿಯಲ್ಲಿ ತಿಳಿಯದ ಕಾರಣ ನ್ಯಾಯಾಲಯದಿಂದ ಶ್ರೀ ಕಮಲ್ ಜಿ ವಕೀಲರನ್ನು ಹಿಂದಿ ಭಾಷೆದ ಕನ್ನಡ ಭಾಷಗೆ ತರ್ಜುಮೆಗಾಗಿ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಪಿ.ಕೆ ವಕೀಲರಿಂದಃ

**1973** ನೇ ಇಸವಿಯಿಂದ ದಾವಾ ಸ್ವತ್ತಿಗೆ ಸಂಬಂಧಿಸಿ ಯಾವೆಲ್ಲಾ ವ್ಯವಹಾರ ನಡೆದಿರುತ್ತದೆ ಎನ್ನುವ ವಿಷಯ ವೈಯಕ್ತಿಕವಾಗಿ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು ವಾದಿ ಕಂಪನಿಯ **Director** ಗಳಿಗ ಮಾತ್ರ ತಿಳಿದಿದ್ದು ನನಗೆ ಯಾವುದೇ ವಿಷಯ ಗೊತ್ತಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ವಾದಿ ಕಂಪನಿ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಲು ಯಾವುದೇ ಅಧಿಕಾರವುಳ್ಳವನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಪ್ರಥಮ ಬಾರಿಗೆ ಯಾವಾಗ ನೋಡಿರುತ್ತೇನೆ ನನಗೆ ಜ್ಞಾಪಕ ಇಲ್ಲ. ಸಾಕ್ಷಿಯು ಮುಂದುವರೆದು ದಾವೆಯನ್ನು ಸಲ್ಲಿಸುವಾಗ ಪ್ರಥಮ ಬಾರಿಗೆ ನೋಡಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮಾದಯ್ಯ ಎನ್ನುವವರು ಬರೆದುಕೊಟ್ಟ ಕ್ರಯ ಪತ್ರದ ಬಗ್ಗೆ ನನಗೆ ಗೊತ್ತು. ಸದರಿ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಬಿಲ್ಡಿಂಗ್ ಇರುತ್ತದೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಮಾದಯ್ಯ ಬರೆದುಕೊಟ್ಟ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಬಿಲ್ಡಿಂಗ್ ಇರುತ್ತದೆ

ಎಂದು ವಾದಿ ಕಂಪನಿಯವರು ದಾವಾ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಬಿಲ್ಡಿಂಗ್ ಪ್ರಸ್ತುತವಾಗಿ ಇರುವುದಿಲ್ಲ. ದಾವಾ ಸ್ವತ್ತನ್ನು ಸಂಜಯ್ **?** ಕುದಾಲ್ ರವರು ಖರೀದಿಸುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ಬಿಲ್ಡಿಂಗ್ ಇತ್ತು ನಂತರ ಬಿಲ್ಡಿಂಗ್ ನ್ನು ಹೊಡೆದು ಹಾಕಲಾಗಿರುತ್ತದೆ. ಸದರಿ ಬಿಲ್ಡಿಂಗ್ ನ್ನು ಯಾರು ಕಟ್ಟಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಪರಿಮಳ ಎನ್ನುವವರು ಸೈಟ್ ನಂ.**96** ಮತ್ತು ತಮ್ಮ ಸ್ವತ್ತು ಎಂದು ಹೇಳುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಸಿ ಹದ್ದುಬಸ್ತು ಮಾಡಿಕೊಡುವಂತೆ ಕಾರ್ಪೊರೇಷನ್ ಅರ್ಜಿಯನ್ನು ವಾದಿಳಗು ಸಲ್ಲಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಆದರೆ ದಿನೇಶ್ ರವರು ದಾವಾ ಸ್ವತ್ತಿನ ಕೇರ್ ಟೆಕರ ಆಗಿದ್ದರು ಸದರಿಯವರು ಮಾಡಿರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ನಂಬರನ್ನು ನಾನು **verify** ಮಾಡಿರುವುದಿಲ್ಲ ಆದರೆ ನಮ್ಮ ಪರ ವಕೀಲರು **verify** ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಶ್ಚಿಮಭಿಮುಖಕ್ಕೆ ಯಾವ ಸ್ವತ್ತು ಇರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿ ಹದ್ದುಬಸ್ತು ಮಾಡಿಕೊಡುವಂತೆ ಸಿಟಿ ಸರ್ವೆಗೆ ಅರ್ಜಿ ಸಲ್ಲಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿ ಸಂಜಯ್ ಕುದಾಲ್ ರವರು ಅವರ ಹೆಂಡತಿಯೊಂದಿಗೆ ಸೇರಿಕೊಂಡು ಪರಿಮಳ ರವರ

ವಿರುದ್ಧ ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಸಂಜಯ್ **?**ರವರು ಹಕ್ಕ ಘೂಷಣೆ ಕೋರಿ ಪರಿಮಳ ವಿರುದ್ಧ. ಸಲ್ಲಿಸಿದ್ದರು ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ವಾದಿಯ ವಿಕ್ರೆಯದಾರರು ಪರಿಮಳ ರವರ ವಿರುದ್ಧ ಹಲವಾರು ಪ್ರಕರಣಗಳನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಹಳೆಯ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.